ಸ-72
(203)

**ಶ್ರೀ ಹೆಚ್.ಎಂ.ರೇವಣ್ಣ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಇವರು ನಿಯಮ-72ರ ಅಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸರ್ಕಾರದ ಹೇಳಿಕೆ.**

## ವಿಷಯ

"ಬೆಂಗಳೂರು ನಗರದ ಸುತ್ತಮುತ್ತಲಿನ ಸೌತ್ ಆಫ್ರಿಕಾ, ಉಗಾಂಡ ನೈಜೀರಿಯಾ ಹಾಗೂ ಇತರೆ ದೇಶಗಳಿಂದ ಪ್ರವಾಸಿ ವೀಸಾ ಹಾಗೂ ವಿದ್ಯಾಭ್ಯಾಸ ವೀಸಾದಡಿಯಲ್ಲಿ ವಾಸಿಸುತ್ತಿದ್ದು ಇವರುಗಳು ವೀಸಾ ಅವಧಿ ಮುಗಿದಿದ್ದರೂ ಅಕ್ರಮವಾಗಿ ನೆಲೆಸಿರುವ ಹಾಗೂ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯಬಯಸುತ್ತೇನೆ."

## ಸರ್ಕಾರದ ಹೇಳಿಕೆ

- ಬೆಂಗಳೂರು ನಗರದ ಸುತ್ತಮುತ್ತ ಸೌತ್ ಆಫ್ರಿಕಾ, ಉಗಾಂಡ ನೈಜೀರಿಯಾ ದೇಶಗಳು ಸೇರಿದಂತೆ 55 ದೇಶಗಳಿಂದ ಒಟ್ಟು 769 ವಿದೇಶಿಯರು ವೀಸಾ ಅವಧಿ ಮುಗಿದಿದ್ದರೂ ವಾಸಿಸುತ್ತಿರುತ್ತಾರೆ ಮತ್ತು ಬೆಂಗಳೂರು ನಗರ ವ್ಯಾಪ್ತಿಯಲ್ಲಿ 551 ವಿದೇಶಿಯರು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಬಗ್ಗೆ ಪ್ರಕರಣಗಳು ಪತ್ತೆಯಾಗಿದ್ದು, ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.
- ವೀಸಾ ಅವಧಿ ಮುಗಿದಿದ್ದರೂ ಅಕ್ರಮವಾಗಿ ವಾಸವಿರುವ ವಿದೇಶಿಯರನ್ನು ಪತ್ತೆಹಚ್ಚುವ ಬಗ್ಗೆ ಎಲ್ಲಾ ಘಟಕಾಧಿಕಾರಿಗಳಿಗೆ ತಿಳಿಸಲಾಗಿದ್ದು, ಅಂತಹವರು ಕಂಡು ಬಂದಲ್ಲಿ ಕೂಡಲೇ ಕಾನೂನು ಕ್ರಮವನ್ನು ಜರುಗಿಸುವಂತೆ ಸೂಚಿಸಲಾಗಿರುತ್ತದೆ.
- ಅನಧಿಕೃತ ವಾಸವಾಗಿರುವ ವಿದೇಶಿಯರ ವಿರುದ್ಧ ಈಗಾಗಲೇ ಎಲ್.ಓ.ಸಿ ಗಳನ್ನು ಹೊರಡಿಸಲಾಗಿರುತ್ತದೆ.
- ಪತ್ತೆಯಾದ ಅನಧಿಕೃತ ವಿದೇಶಿಯರನ್ನು ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಅವರ ದೇಶಕ್ಕೆ ಗಡಿಪಾರು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಅನಧಿಕೃತ ವಾಸವಿರುವ ವಿದೇಶಿಯರನ್ನು ಪತ್ತೆ ಹಚ್ಚಲು, ವಿದೇಶಿಯರು ವಾಸವಿರುವ ಹೋಟೆಲ್, ಹಾಸ್ಟಲ್ / ಮನೆ ಮಾಲೀಕರುಗಳಿಂದ ಫಾರ್ಮ್ "ಸಿ" ಮತ್ತು ಕಾಲೇಜುಗಳಿಂದ ಫಾರ್ಮ್ "ಎಸ್"ಗಳನ್ನು ಪಡೆದು ಸ್ಥಳೀಯ ಪೊಲೀಸ್ ಠಾಣೆಗಳಿಗೆ ನೀಡಿ ಮಾಹಿತಿ ಒದಗಿಸುವಂತೆ ಮತ್ತು ಶಂಕಿತ ಅನಧಿಕೃತ ವಿದೇಶಿಯರ ಬಗ್ಗೆ ಅನುಮಾನ ಬಂದಲ್ಲಿ ಕೂಡಲೆ ಸಂಬಂಧಿಸಿದ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಸಂಬಂಧಿಸಿದ ಕಾಲೇಜು ಮತ್ತು ಮನೆ ಮಾಲೀಕರಿಗೆ ತಿಳಿಸಲಾಗಿರುತ್ತದೆ.
- ಕಾಲ ಕಾಲಕ್ಕೆ ವಿದೇಶಿಯರು ಭೇಟಿ ನೀಡುವ ಪ್ರವಾಸಿ ತಾಣಗಳನ್ನು ಪರಿಶೀಲಿಸುತ್ತಾ ಬರುತ್ತಿದ್ದು, ಅಕ್ರಮವಾಗಿ ವಾಸವಿರುವ ವಿದೇಶಿಯರು ಪತ್ತೆಯಾದಲ್ಲಿ ಸದರಿಯವರ ವಿರುದ್ಧ ವಿದೇಶಿಯರ ಕಾಯ್ದೆ ಪ್ರಕಾರ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.
- ವಿದೇಶಿಯರ ಡ್ರಗ್ಸ್ ಮಾರಾಟ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದು ಕಂಡುಬಂದಲ್ಲಿ ಕೂಡಲೆ ಅವರ ವಿರುದ್ಧ ಎನ್.ಡಿ.ಪಿ.ಎಸ್ ಆಕ್ಟ್ ಪ್ರಕಾರ ಪ್ರಕರಣ ದಾಖಲಿಸಲಾಗುತ್ತಿದೆ.

**ಸಂಖ್ಯೆ:** ಹೆಚ್‌ಡಿ 147 ಪಿಎಂಎಸ್ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು